ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 3 ನೇ ಪ್ರತಿವಾದಿ ವಾರಸುದಾರರ ಪರ ಶ್ರೀ ಕೆ ಎಂ ಎನ್ ವಕೀಲರಿಂದಃ-

ನಾನು 1 ನೇ ಪ್ರತಿವಾದಿ ಕಂಪನಿಯನ್ನು ಪ್ರತಿನಿಧಿಸುತ್ತಿರುತ್ತೇನೆ. ಪ್ರಸ್ತುತ ದಾವೆಯಲ್ಲಿ 1 ನೇ ಪ್ರತಿವಾದಿ ಕಂಪನಿಯ ಪರವಾಗಿ ಲಿಖಿತ ಹೇಳಿಕೆಯನ್ನು ಆ ಸಮಯದಲ್ಲಿ ನಿರ್ದೇಶಕರಾಗಿದ್ದ ಆಸೀಫ್ ಇಕ್ಬಾಲ್ ರವರು ಸಲ್ಲಿಸಿರುತ್ತಾರೆ. ನಾನು 1 ನೇ ಪ್ರತಿವಾದಿ ಕಂಪನಿಗೆ 2014 ರಲ್ಲಿ ನಿರ್ದೇಶಕನಾಗಿರುತ್ತೇನೆ. 1 ನೇ ಪ್ರತಿವಾದಿ ಕಂಪನಿಯು ಈಗಲೂ ಅಸ್ಥಿತ್ವದಲ್ಲಿ ಇರುತ್ತದೆ. ಏಷಿಯನ್ ಇನ್ಸ್ಟ್ಯೂಟ್ ಅಫ್ ಡಿಸೈನ್ ವೆಕೆಷನಲ್ ಟ್ರೇನಿಂಗ್ ಇನ್ಸ್ಟ್ಯೂಟ್ ಸಂಸ್ಥೆಯು 1 ನೇ ಪ್ರತಿವಾದಿ ಕಂಪನಿಯ ವಿಭಾಗವಾಗಿರುತ್ತದೆ. ಸದರಿ ಸಂಸ್ಥೆಯು 2020-21 ರಲ್ಲಿ ಸ್ಥಾಪನೆಯಾಗಿರುತ್ತದೆ. 1 ನೇ ಪ್ರತಿವಾದಿ ಕಂಪನಿಯ ಮೂಲ ಉದ್ದೇಶ ಶಿಕ್ಷಣ ಸೇವೆವಾಗಿರುತ್ತದೆ. 1 ನೇ ಪ್ರತಿವಾದಿ ಕಂಪನಿಗೆ ನಾನು 2014 ರಲ್ಲಿ ನಿರ್ದೇಶಕನಾಗಿರುತ್ತೇನೆ. ಆ ಬಗ್ಗೆ ನಾನು ದಾಖಲೆ ಹಾಜರುಪಡಿಸಿರುವುದಿಲ್ಲ, ಅದನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಏಷಿಯನ್ ಇನ್ಸ್ಟ್ಯೂಟ್ ಅಫ್ ಡಿಸೈನ್ ವೆಕೆಷನಲ್ ಟ್ರೇನಿಂಗ್ ಇನ್ಸ್ಟ್ಯೂಟ್ ಸಂಸ್ಥೆ ಚಾಲ್ತಿಯಲ್ಲಿ ಇರುವ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ, ಅದನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. 1 ನೇ ಪ್ರತಿವಾದಿ ಕಂಪನಿ ನಿರ್ದೇಶಕರುಗಳೇ ಏಷಿಯನ್ ಇನ್ಸ್ಟ್ಯೂಟ್ ಅಫ್ ಡಿಸೈನ್ ವೆಕೆಷನಲ್ ಟ್ರೇನಿಂಗ್ ಇನ್ಸ್ಟ್ಯೂಟ್ ಸಂಸ್ಥೆಯ ನಿರ್ದೇಶಕರಾಗಿರುತ್ತಾರೆ.

ಈ ಹಿಂದೆ ಲಿಖಿತ ಹೇಳಿಕೆ ಸಲ್ಲಿರುವ ನಿರ್ದೇರ್ಶರಾದ ಅಸೀಫ್

ಇಖ್ಬಾಲ್ ರವರು ಈಗ ನಿರ್ದೇಶಕರಾಗಿ ಉಳಿದಿರುವುದಿಲ್ಲ.

1 ನೇ ಪ್ರತಿವಾದಿ ಕಂಪನಿಯಲ್ಲಿ 5 ಜನ ನಿರ್ದೇಶಕರುಗಳು ಇರುತ್ತಾರೆ ಅವರ ಹೆಸರು 1. ಲಫೀರ್ ಮಹಮ್ಮದ್, 2. ಅಬ್ದುಲ್ಲಾ ಸೇಪ್ ಅಹಮದ್ ಅಲ್ಸಬಾಯಿ, 3. ಅಲ್ ಅರ್ಮಿ ಮತ್ತು 4. ಮಸೂರ್ ಅಲ್ ಸೂನ್ಯೆಡಿ. 5. ಅನೀಫ್ ಮಹಮ್ಮದ್. ಎಲ್ಲಾ ನಿರ್ದೇಶಕರು ಸೇರಿ ಪ್ರಸ್ತುತ ದಾವೆಯಲ್ಲಿ ನನ್ನನ್ನು ನೇಮಿಸಿರುವ ಬಗ್ಗೆ ನಿಡಿ-1 ರಂತೆ ರೆಸಲ್ಯೂಷನ್ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಡಿ-1 ರಲ್ಲಿ ಇಬ್ಬರು ನಿರ್ದೇಶಕರ ಸಹಿ ಇರುತ್ತದೆ. ಸಾಕ್ಷಿಗೆ ಯಾವುದೇ ರೆಸಲ್ಯೂಷನ್ ಅನ್ನು ಕಂಪನಿಯು ಮಾಡುವಾಗ 2/3 ನೇ ಕೋರಂ ಇರಬೇಕು ಎಂದರೆ ಸಾಕ್ಷಿ ಇಬ್ಬರ ನಿರ್ದೇರ್ಕರ ಸಹಿ ಇದ್ದರೆ ಸಾಕು ಎಂದು ನುಡಿಯುತ್ತಾರೆ. ನಿಡಿ-1 ನಮ್ಮ ಕಂಪನಿಯ ಮೈನೂಟ್ ಪುಸ್ತಕದ ಪ್ರತಿಯಾಗಿರುತ್ತದೆ. ಸಾಕ್ಷಿಗೆ ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಿಡಿ-1 ರಂತೆ ನಿಮಗೆ ಸಾಕ್ಷಿ ನುಡಿಯಲು ನೀಡಿದ ಅನುಮತಿ ಬಗ್ಗೆ ಬರೆಸಿರುತ್ತೀರಾ ಎಂದರೆ ಸಾಕ್ಷಿಯು ಅದರಲ್ಲಿ ಬರೆದಿರುತ್ತದಯೋ ಅಥವಾ ಇಲ್ಲವೋ ಎಂದು ನನಗೆ ಜ್ಞಾಪಕ ಇರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರಗಳ ಬಗ್ಗೆ ನನಗೆ ತಿಳಿದಿರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರದ ಕಂಡಿಕೆ 4 ರಲ್ಲಿ ಹೇಳಿರುವ ವಿಷಯವು ಹೇಗೆ ತಿಳಿದಿರುತ್ತದೆ ಎಂದರೆ ಸಾಕ್ಷಿಯು ನಾನು ಕಂಪನಿಯ ನಿರ್ದೇಶಕನಾಗುವ ಪೂರ್ವದಲ್ಲಿ ಆ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ ಆದ್ದರಿಂದ 1993 ರಲ್ಲಿ ಆದ ಅಧಿಕಾರ ಪತ್ರದ ಬಗ್ಗೆ ತಿಳಿದಿರುತ್ತದೆ, ಸಾಕ್ಷಿ ಮುಂದುವರೆದು 2005 ರಲ್ಲಿ ನಮ್ಮ ಸಂಸ್ಥೆಯು

ಸ್ಥಾಪನೆಯಾದ ಸಮಯದಲ್ಲಿ ದಾಖಲೆಗಳನ್ನು ಪರಿಶೀಲಿಸುವಾಗ ಅಧಿಕಾರ ಪತ್ರದ ಬಗ್ಗೆ ತಿಳಿದಿರುತ್ತದೆ. 2005 ರಲ್ಲಿ ನಾನು ನಮ್ಮ ಸಂಸ್ಥೆ ಸೀನಿಯರ್ ಮ್ಯಾನೇಜ್ಮೆಂಟ್ ಸದಸ್ಯನಾಗಿದ್ದೆ. 2005 ರಲ್ಲಿ ನಾನು ನಮ್ಮ ಸಂಸ್ಥೆ ಸೀನಿಯರ್ ಮ್ಯಾನೇಜ್ಮೆಂಟ್ ಸದಸ್ಯನಾಗಿದ್ದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಮಾಡಿರುವುದಿಲ್ಲ. 1 ನೇ ಪ್ರತಿವಾದಿ ಸಂಸ್ಥೆಯು 2005 ರಲ್ಲಿ ನೋಂದಣಿಯಾದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 1 ನೇ ಪ್ರತಿವಾದಿ ಕಂಪನಿ ನೋಂದಣಿಯಾಗುವ ಸಮಯದಲ್ಲಿ ಇಬ್ಬರೇ ನಿರ್ದೇಶಕರುಗಳು ಇದ್ದರು. ನಿಡಿ-1 ರ ಮೂಲ ಮೈನ್ಯೂಟ್ ಪುಸ್ತಕವನ್ನು ಇಲ್ಲಿಯವರೆಗೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

1 ನೇ ಪ್ರತಿವಾದಿ ಸಂಸ್ಥೆಯು ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ರೆಸಲ್ಯೂಷನ್ ಪಾಸ್ ಮಾಡಿದ ನಂತರ ಖರೀದಿಸಿರುತ್ತಾರೆ, ಆ ಬಗ್ಗೆ ದಾಖಲೆ ನಮ್ಮ ಕಂಪನಿಯಲ್ಲಿ ಇರುತ್ತದೆ. ಆದರೆ ಅದು ಈಗ ಕಂಪನಿಯಲ್ಲಿ ಇರುತ್ತದೋ ಇಲ್ಲವೋಎಂದು ನೋಡಿ ಹೇಳಬೇಕಾಗುತ್ತದೆ. ಪ್ರತಿ ವರ್ಷ ನಮ್ಮ ಸಂಸ್ಥೆಯಲ್ಲಿ ಯಾವುದೇ ರೆಸಲ್ಯೂಷನ್ ಮಾಡುವ ಸಂದರ್ಭದಲ್ಲಿ ಮೈನ್ಯೂಟ್ ಪುಸ್ತಕದಲ್ಲಿ ನಮೂದು ಮಾಡಲಾಗುತ್ತದೆ ಮತ್ತು ಸದರಿ ಮೈನ್ಯೂಟ್ ಪುಸ್ತಕದಲ್ಲಿ ಆರ್ ಓಸಿ ಗೆ ನೀಡಲಾಗುತ್ತದೆ ಎಂದರೆ ಸರಿ. 2005 ರಲ್ಲಿ ನಮ್ಮ ಸಂಸ್ಥೆಯು ಆಸ್ತಿಯನ್ನು ಖರೀದಿಸುವ ಬಗ್ಗೆ ರೆಸಲ್ಯೂಷನ್ ಮಾಡಿದ್ದನ್ನು ಆರ್ ಓ ಸಿ ಇಂದ ಸದರಿ ದಾಖಲೆಯನ್ನು ಪಡೆದು ನ್ಯಾಯಾಲಯಕ್ಕೆ ಸಲ್ಲಿಸಲು ನಿಮಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿಯು ಆ ದಾಖಲೆ ನಮ್ಮ ಬಳಿ ಇರುವುದಿಲ್ಲ ನಾನು ಆರ್ ಓ ಸಿ ಬೋರ್ಡ್ ಮುಂದೆ ಅರ್ಜಿ ಹಾಕಿ ನೋಡುತ್ತೇನೆ ಎಂದು ನುಡಿಯುತ್ತಾರೆ.

<u>ಓ.ಎಸ್. 84/2006 ರಲ್ಲಿ</u>
ಡಿ.ಡಬ್ಲ್ಯೂ-1(ಹನೀಫ್ ಮಹಮದ್)

ನಿಡಿ-1 ರ ಅಸಲು ಪ್ರತಿಯನ್ನು, ದಿನಾಂಕ 01.04.1993 ರ ಜಿಪಿಎ ಮತ್ತು 2005 ರಲ್ಲಿ ನಾನು ಮ್ಯಾನೇಜ್ಮೆಂಟ್ ಸದಸ್ಯನಾಗಿದ್ದ ಬಗ್ಗೆ ಮತ್ತು 2014 ರಲ್ಲಿ ನಿರ್ದೇಶಕನಾಗಿದ್ದ ಬಗ್ಗೆ ಫಾರಂ ನಂ-32 ನ್ನು ನ್ಯಾಯಾಲಯಕ್ಕೆ ಹಾಜರುಮಾಡಿಲ್ಲದೇ ಇರುವ ಕಾರಣ ನಾನು ದಾವಾ ಆಸ್ತಿಯನ್ನು ಲಪಟಾಯಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪ್ರತಿವಾದ ಪತ್ರವನ್ನು ಹಾಕುವ ಸಮಯದಲ್ಲಿ 1 ನೇ ಪ್ರತಿವಾದಿ ಸಂಸ್ಥೆಯಲ್ಲಿ ಆಸಿಪ್ ಇಕ್ಬಾಲ್ ನಿರ್ದೇಶಕರಾಗಿದ್ದರು ನಂತರ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸುವ ಸಮಯದಲ್ಲಿ ಸದರಿ ಇಕ್ಬಾಲ್ ರವರಿಂದ ಮಾಹಿತಿ ಪಡೆದು ನಂತರ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ನನಗೆ 2005 ರಿಂದಲೂ ಎಲ್ಲಾ ಮಾಹಿತಿ ಇದ್ದುರಿಂದ ನಾನೇ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎನ್ನುತ್ತಾರೆ. ಈ ಹಿಂದೆ 1 ನೇ ಪ್ರತಿವಾದಿ ಪರವಾಗಿ ಆಸಿಫ್ ಇಕ್ಬಾಲ್ ರವರು ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ.

1 ನೇ ಪ್ರತಿವಾದಿ ಸಂಸ್ಥೆಯು ದಾವಾ ಆಸ್ತಿಯನ್ನು ಯಾರು ಬೇಕಾದರೂ ಯಾರದಾರು ಖರೀದಿಸಬಹುದು ಎಂದು ಸಾರ್ವಜನಿಕ ಪ್ರಕಟಣೆಯನ್ನು ನಮ್ಮ ವಕೀಲರಾದ ಕುಮಾರ್ ಎನ್ನುವವರ ಕಡೆಯಿಂದ ದಿನ ಪತ್ರಿಕೆಯಲ್ಲಿ ಹೊರಡಿಸಲಾಗಿರುತ್ತದೆ ಎಂದರೆ ಸರಿಯಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ನಿಪಿ-46 ನ್ನು ತೋರಿಸಲಾಗಿ ಅದರಲ್ಲಿ ಇದ್ದ ಪ್ರಕರಣೆಯನ್ನು 1 ನೇ ಪ್ರತಿವಾದಿ ಸಂಸ್ಥೆಯು ಪ್ರಕಟಿಸಲಾಗಿರುತ್ತದೆ

ಎಂದರೆ ಸಾಕ್ಷಿ ಸದರಿ ದಾಖಲೆ ನೋಡಿ ಅದನ್ನು ನಾವು ಪ್ರಕಟಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-46 ರಲ್ಲಿ ಪತ್ರಿಕಾ ಪ್ರಕರಣೆಯನ್ನು 1 ನೇ ಪ್ರತಿವಾದಿ ಕಂಪನಿಯವರೇ ಹೊರಡಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ದಿನಾಂಕ 01.04.1993 ರ ಜಿಪಿಎ ಮತ್ತು ಕ್ರಯದ ಕರಾರು ಪತ್ರವನ್ನು 2 ನೇ ಪ್ರತಿವಾದಿರವರು ನಮಗೆ ನೀಡಿದ್ದರು ಎಂದರೆ ಸರಿ. ಸದರಿ ಜಿಪಿಎ ಮತ್ತು ಕರಾರು ಪತ್ರವು ನೋಂದಣಿಯಾಗಿರಲಿಲ್ಲ. ಸದರಿ ದಾಖಲೆಗಳನ್ನು ನಾವು ಲಿಖಿತ ಹೇಳಿಕೆ ಸಲ್ಲಿಸುವ ಸಮಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸುವ ಸಮಯದಲ್ಲೂ ಸಹ ಸದರಿ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿಗೆ ನೀವು ನಿಮ್ಮ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುವ ಪೂರ್ವದಲ್ಲಿ ಸದರಿ ದಾಖಲೆಗಳು ನಿಮ್ಮ ಜೊತೆಯಲ್ಲಿ ಇದ್ದವು ಎಂದರೆ ಸಾಕ್ಷಿಯು ಆ ದಾಖಲೆಗಳು ನಮ್ಮ ಬಳಿ ಇದ್ದವು ಆದರೆ ನಮ್ಮ ಸಂಸ್ಥೆಯನ್ನು ಬೇರೆ ಕಡೆಗೆ ಸ್ಥಳಾಂತರಿಸುವ ಸಮಯದಲ್ಲಿ ಕಳೆದು ಹೋಗಿರುತ್ತದೆ, ಆ ಬಗ್ಗೆ ಪೊಲೀಸರಿಗೆ ದೂರನ್ನು ಸಹ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಆ ಎರಡೂ ದಾಖಲೆಗಳು ನಮ್ಮ ಕಂಪನಿಯ ಬಳಿಯಲ್ಲೇ ಇದ್ದವು.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.